ಶ್ರೀ ಎಸ್. ಎಸ್. ಆರಕೇರಿ.—ಬಹುಶಃ ಮಾನ್ಯ ಮಂತ್ರಿಗಳ ಹತ್ತಿರ ತಪ್ಪು ವರದಿ ಇರಬಹುದು. ತಡ್ಡೀವಾಗಿ, ಮಂಕಲಗಿ, ಹಿರೇಲುವಾಣಿ ಮುಂತಾದ ಹತ್ತು ಗ್ರಾಮಗಳು ಈ ಯೋಜನೆಯ ಕೆಳಗಡೆ ಬರುತ್ತವೆ. ತಡ್ಡೆವಾಡಿ ಪಕ್ಕದಲ್ಲಿ ಭೀಮಾ ನದಿ ಹರಿಯುತ್ತಿದೆ; ಆದರಿಂದ ಈ ಗ್ರಾಮಗಳಿಗೆ ಹೆಚ್ಚಿನ ನೀರಾವರಿ ಸಿಗುತ್ತದೆಯೇ ಹೊರತು, ಕೃಷ್ಣಾ ಮೇಲ್ದಂಡೆ ಯೋಜನೆಗೆ ಇದು ಬರುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಇದನ್ನು ಪುನರ್ ಪರಿಶೀಲನೆ ಮಾಡುವರೆ ?

SRI B. SUBBAYYA SHETTY —The area comes as per the report at present, under the Upper Krishna Project II Stage. So, in this Stage the lift irrigation facilities w ll be given to these villages.

ಶ್ರೀ ಎಸ್. ಎಸ್. ಆರಕೇರಿ.—ಇದನ್ನು ಮಾನ್ಯ ಸಚಿವರು ಪುನರ್ ಪರಿಶೀಲನೆ ಮಾಡುವರೆ ? ಇದು ಎತ್ತರವಾದ ಪ್ರದೇಶವಾದ್ದರಿಂದ ಕೃಷ್ಣ ಮೇಲ್ದಂಡೆ ನೀರು ಬರುವುದಿಲ್ಲ.

SRI B. SUBBAYYA SHETTY.—We will look into the question again; but at present it comes un 'er the command area of the Upper Krishna Projeect.

ಶ್ರೀ ಎಸ್. ಎಸ್. ಆರಕೇರಿ.—ಈ ಯೋಜನೆಯಿಂದ ಹತ್ತಾರು ಗ್ರಾಮಗಳ ಸುಮಾರು ನಾಲ್ಕು ಸಾವಿರ ಎಕರೆಗೆ ನೀರನ್ನು ಉಣಿಸಬಹುದೆಂದು ಸೂಪರಿಂಟೆಂಡೆಂಟ್ ಮತ್ತು ಮುಖ್ಯ ಇಂಜಿನಿಯರವರು ವರದಿ ಕೊಟ್ಟಿದ್ದಾರೆ, ಆದರೆ, ಇದು ಕೃಷ್ಣಾ ಮೇಲ್ದಂಡೆ ಯೋಜನೆಯ ಕಮ್ಯಾಂಡಿನಲ್ಲಿ ಬರುತ್ತದೆಂದು ಇದನ್ನು ಕೈಬಿಡುವುದಾದರೆ, ಆದರಿಂದ ಅಲ್ಲಿನ ಜನರಿಗೆ ಅನುಕೂಲ ವಾಗುವುದಿಲ್ಲ. ಭೀಮಾ ನದಿ ಹಳ್ಳಿಯ ಪಕ್ಕದಲ್ಲೇ ಹರಿಯುವುದರಿಂದ, ಅಲ್ಲಿನ ಸಾವಿರಾರು ರೈತರಿಗೆ ಕಲ್ಯಾಣವಾಗುತ್ತದೆ ಮತ್ತು ಹತ್ತಾರು ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸಲಿಕ್ಕೆ ಸಾಧ್ಯವಾಗುವುದು. ಆದುದರಿಂದ, ಮಾನ್ಯ ಮಂತ್ರಿಗಳು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಪ್ರಶ್ನೆ ಕಳುಹಿಸಿದಾಗಲೇ ''ಲದ್ದೇವಾಡಿ'' ಎಂದು ಬರೆದು ಕಳುಹಿಸಿದ್ದೀರಿ. ಅಲ್ಲದೆ, ತಮ್ಮ ಪ್ರಶ್ನೆ ಅಡ್ಮಿಟ್ ಆಗಿದೆ ಎಂದು ತಮಗೆ ತಿಳಿಸಿದ ಪತ್ರದಲ್ಲೂ ಈ ವಿವರ ಇರುತ್ತದೆ. ಆಗಲೂ, ತಾವು ಏನಾದರೂ ಲೋಪದೋಷವಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ನಮ್ಮ ಕಾರ್ಯಾಲಯಕ್ಕೆ ತಿಳಿಸಬಹುದಾಗಿತ್ತು. ಹಾಗೆ ಮಾಡದೆ, ಈಗ ನಮ್ಮ ಕಾರ್ಯಾಲಯದ ಮೇಲೆ ಆರೋಪ ಮಾಡುವುದು ನ್ಯಾಯವೆ ?

ಶ್ರೀ ಎಸ್. ಎಸ್. ಆರಕೇರಿ.—ಕ್ಷಮಿಸಿ. ನನ್ನ ಪ್ರಶ್ನೆ ಅಡ್ಮಿಟ್ ಆಗಿದೆ ಎಂದು ತಿಳಿಸಿದ ಪತ್ರ ನನ್ನ ಗಮನಕ್ಕೆ ಬರಲಿಲ್ಲ.

Grant of Old-age Pension in Kolar District

516. SRI C. M. ARUMUGHAM (K.G.F.).—Will the Minister for Finance be pleased to state.—

(a) the number of applications for grant of old age pensions received from Kolar District;

(b) the number of applicants for the same from Kolar Gold Fields;

(c) the number of old age pensions sanctioned to Kolar District;

(d) the number of old age pensions sanctioned to K.G.F.;

(e) the number of applications pending in respect of Kolar District/as also K.G.F. ;

(f) the reasons for their pendency ?

SRI S. M. YAHYA (Minister for Finance).—

(a) 37,517.

(b) 3,592.

(c) 11,890.

(d) 243.

(e) 2,549 (Kolar District). Out of this 148 (K.G F.).

(f) Enquiry by the Revenue Department officials is quite necessary to finalise the case this has taken some time. All the pending case will be got disposed of as early as possible.

SRI C. M. ARUMUGAM.—In the Kolar District out of 37,517 applications 11,819 have been sanctioned and 2,541 are pending. May I know what happened to the rest of the applications ?

† SRI S M. YAHYA. —Many are rejected.

SRI C. M. ARUMUGAM.—May I know the reasons for the rejections of these applications ?

SRI S. M. YAHYA.—Rejected due to underage, due to applicants having dependents, due to non-residing at the place, due to professional beggary, due to owning property and many other reasons.

SRI C. M. ARUMUGAM.—Please tell me about the pending cases. Is pending with the Revenue Inspector, Tahsildar or Assistant Commissioner ?

SRI S. M. YAHYA.—Some of them are pending with Revenue Inspector, and our Government orders says that they must settle it within three months. With that period they must accept or reject the applications. Because of the Taluk Board elections and Panchayat elections, it was delayed. However, we have instructed them to expedite such applications.

SRI C. M. ARUMUGAM.—Has it come to the notice of the Government that though there are large number of deserving applications, the Revenue Inspector is not expediting but he is attending to his own job ?

SRI S, M YAHYA.—It has not come to the notice of the Government. But I wonder why there were so much rejection of applications. I have got the figures here. For example some applications were rejected due to under age; some rejected on account of applicant having some dependents etc. If genuine people are not provided with this pension we have to see that they are provided. It is our duty to provide them.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ ತಮ್ಮ ಉತ್ತರದಲ್ಲಿ ಕೋಲಾರ ಜಿಲ್ಲೆಯಲ್ಲಿ ೩೭ ೫೧೭ ಅಪ್ಲಿಕೇಷನ್‌ಗಳು ಬಂದಿದ್ದು ಅದರಲ್ಲಿ ೨೩.೦೭೮ ಅಪ್ಲಿಕೇಷನ್‌ಗಳು ರಿಜೆಕ್ಟ್ ಆಗಿವೆ ಎಂದು ಹೇಳಿದ್ದೀರಿ, ಕೆ.ಜಿ.ಎಫ್. ನಿಂದ ೩೯೫೨ ಅರ್ಜಿಗಳು ಬಂದಿದ್ದು ಅದರಲ್ಲಿ ೩೨೦೧ ಅಪ್ಲಿಕೇಷನ್‌ಗಳು ರಿಜೆಕ್ಟ್ ಆಗಿವೆ ಎಂದು ಹೇಳಿದ್ದೀರಿ. ಅಂದರೆ ವೃದ್ಧಾಪ್ಯವೇತನಕ್ಕಾಗಿ ಬಂದ ಅರ್ಜಿಗಳಲ್ಲಿ ೯೦ ಪರ್ಸೆಂಟಿಗಿಂತ ಜಾಸ್ತಿ ಅಜಿಗಳು ರಿಜೆಕ್ಟಾಗಿವೆ. ಇದನ್ನು ನೋಡಿದರೆ ವೃದ್ಧಾಪ್ಯವೇತನವನ್ನು ಮಂಜೂರು ಮಾಡಿರುವ ಅಪ್ಲಿಕೇಷನ್‌ಗಳು ಬಹಳ ಕಡಿಮೆ. ರಿಜೆಕ್ಟ್ ಆಗಿರುವುದೇ ಜಾಸ್ತಿಯಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಯಾರಾದರೂ ಆಫೀಸರು ಆ ಸ್ಥಳಕ್ಕೆ ಹೋಗಿ ತನಿಖೆ ಮಾಡಿ ಮಂಜೂರು ಮಾಡುತ್ತಾರೆಯೇ? ಅಥವಾ ಅಲ್ಲಿ ಯಾವ ಪ್ರೊಸೀಜರ್ ಫಾಲೋ ಮಾಡುತ್ತೀರಾ? ಅಲ್ಲಿರತಕ್ಕ ಶಾಸಕರನ್ನು ಯಾರನ್ನಾದರೂ ಕೇಳುತ್ತಾರೆಯೇ ಹೇಗೆ ನಮ್ಮಲ್ಲಿ ಅಪ್ಲಿಕೇಷನ್ ಕೊಡುವಾಗ ಹೆಚ್ಚಿನ ಜನಗಳು ಶಾಸಕರಿಂದ ಸರ್ಟಿಫಿಕೇಟ್ ತೆಗೆದುಕೊಂಡಿರುತಾರೆ ಹೀಗಿರುವಾಗ ಈ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡುವಾಗ ಯಾವ ಪ್ರೊಸೀಜರ್ ಫಾಲೋ ಮಾಡುತ್ತೀರಾ ಎಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.—ಈ ವಿಚಾರದಲ್ಲಿ ನನಗೂ ಕೂಡ ಸ್ವಲ್ಪ ಆಶ್ಚರ್ಯವಾಯಿತು. ಕೋಲಾರ ಜಿಲ್ಲೆಯು ಜಿಯಾಗ್ರಫಿಕಲ್ ಆಗಿ ಬೇರೆ ಬೇರೆ ರಾಜ್ಯಗಳ ಬಾರ್ಡರ್‌ನಲ್ಲಿ ಇರುವುದರಿಂದ ಅಲ್ಲಿಗೆ ಬೇರೆ ಬೇರೆ ಡಿಸ್ಟ್ರಿಕ್ಟ್‌ನಿಂದ ಎಂದರೆ ಆಂಧ್ರ, ತಮಿಳುನಾಡು ಈ ಪ್ರದೇಶಗಳಿಂದ ಕೋಲಾರ ಜಿಲ್ಲೆಗೆ ಬರತಕ್ಕ ಫ್ಲೋಟಿಂಗ್ ಪಾಪ್ಯುಲೇಷನ್ ಜಾಸ್ತಿ ಇದೆ. ಎಂಪ್ಲಾಯೀಸ್ ಇದ್ದಾರೆ. ವಯಸ್ಸಾದ ತಂದೆ ತಾಯಿಗಳು ಇರುತ್ತಾರೆ. ತಮಿಳುನಾಡಿನಲ್ಲಿ ವೃದ್ಧಾಪ್ಯವೇತನವನ್ನು ತಿಂಗಳಿಗೆ ೨೦ ರೂಪಾಯಿಗಳನ್ನು ಕೊಡುತ್ತಾರೆ. ನಮ್ಮ ರಾಜ್ಯದಲ್ಲಿ ಅಲ್ಲಿಗಿಂತ ಹೆಚ್ಚು ೪೦ ರೂಪಾಯಿಗಳನ್ನು ಕೊಡುತ್ತಿದ್ದೇವೆ. Some reasons are also there. Certain genuine cases might have also been rejected, Anyway, I will see what best could be done in this matter.

ಶ್ರೀ ಕೆ. ಎಂ. ತಮ್ಮಯ್ಯ.—ಕೆಲವರಿಗೆ ಡಿಪೆಂಡೆಂಟ್ಸ್ ಇರುವುದರಿಂದ, ಕೆಲವರಿಗೆ ಅಂಡರ್ ಏಜ್ ಎಂತಲೂ ಕೆಲವರಿಗೆ ಆಸ್ತಿ ಇದೆ ಎಂತಲೂ ವೃದ್ಧಾಪ್ಯವೇತನದ ಅಪ್ಲಿಕೇಷನ್ ರಿಜೆಕ್ಟ್ ಮಾಡಿದ್ದೇವೆ ಎಂದು ಹೇಳಿದಿರಿ, ಅನೇಕ ಜನಗಳು ತಮಗೆ ಡಿಪೆಂಡೆಂಟ್ಸ್ ಇದ್ದರೂ, ಆಸ್ತಿ ಇದ್ದರೂ ವೃದ್ಧಾಪ್ಯವೇತನವನ್ನು ತೆಗೆದುಕೊಳ್ಳುತ್ತಿದ್ದಾರೆ ಅಂಥವರನ್ನು ಹಿಡಿದು ಯಾರಿಗಾದರೂ ಶಿಕ್ಷೆಯನ್ನು ಮಾಡುತ್ತೀರಾ? ಅದಕ್ಕೆ ಪ್ರಾವಿಜನ್ ಮಾಡಿದ್ದೀರಾ? ಅಂಥವರಿಗೆ ಶಿಕ್ಷೆಯನ್ನು ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.—ಆ ರೀತಿ ಸುಳ್ಳುಹೇಳಿ ದುಡ್ಡು ತೆಗೆದುಕೊಂಡದ್ದು ಸರ್ಕಾರದ ಗಮನಕ್ಕೆ ಬಂದರೆ ಅಂಥವರಿಗೆ ತಕ್ಷಣ ಪೆನ್‌ಷನ್ ನಿಲ್ಲಿಸುತ್ತೇವೆ. ಬಹಳ ಕೇಸುಗಳಿಗೆ ಆ ರೀತಿ ಪೆನ್‌ಷನ್ ಸ್ಟಾಪ್ ಮಾಡಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಅಂಥವರು ಆಲ್ಲಿಯವರೆಗೂ ತೆಗೆದುಕೊಂಡದ್ದು ಏನು ಮಾಡುತ್ತೀರಿ ಈ ಪೆನ್‌ಷನ್ ತೆಗೆದುಕೊಳ್ಳತಕ್ಕವರಲ್ಲಿ ೫೦ ಪರ್ಸೆಂಟ್ ಅಂಥವರೇ ಜಾಸ್ತಿ ಇದ್ದಾರೆ. ಅವರು ತೆಗೆದು ಕೊಂಡ ಹಣವನ್ನು ವಸೂಲು ಮಾಡಬೇಕು ಇಲ್ಲದೇ ಹೋದರೆ ಅವರಿಗೆ ಏನಾದರೂ ಶಿಕ್ಷೆಯನ್ನು ಮಾಡ ಬೇಕು. ಇದಕ್ಕೆ ಏನು ಹೇಳುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.—೫೦ ಪರ್ಸೆಂಟ್ ಅಂಥವರೇ ಇದ್ದಾರೆ ಎನ್ನುವ ವಿಚಾರ ಸರಿಯಲ್ಲ ಕೆಲವು ಕೇಸುಗಳು ಆ ರೀತಿ ಆಗಿರಬಹುದು, ನಾವು ಇಡೀ ಸ್ಟೇಟ್‌ನಲ್ಲಿ ಒಂದು ಲಕ್ಷ ೯೦ ಸಾವಿರ ಜನಗಳಿಗೆ ಓಲ್ಡ್‌ಏಜ್ ಪೆನ್‌ಷನ್ ಕೊಡುತ್ತಿದ್ದೇವೆ. ಕೆಲವು ಕೇಸುಗಳು ಮಾನ್ಯ ಸದಸ್ಯರು ಹೇಳಿದಹಾಗೆ ಇರಬಹುದು ಅದಕ್ಕೆ ಆ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಸುಳ್ಳು ಎಂದು ದುಡ್ಡು ತೆಗೆದುಕೊಂಡಾಗ ಅದು ಗೊತ್ತಾದ ಮೇಲೆ ಅದನ್ನು ನಿಲ್ಲಿಸುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರೆ ಅದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರಿನಲ್ಲಿ ನಾನು ಹೆಚ್ಚು ಅರ್ಜಿಗಳಿಗೆ ರುಜು ಮಾಡುತ್ತಿದ್ದೇನೆ. ಇದರಲ್ಲಿ ಎರಡು ರೀತಿಯ ಏಜನ್ಸಿಗಳು ಇವೆ. ಕೆಲವು ಏಜನ್ಸಿಗಳು ಸೇರಿಕೊಂಡು ಬೋಗಸ್ ಪೆನ್‌ಷನರ್ಸ್ ಅನ್ನು ಸೃಷ್ಟಿ ಮಾಡುತ್ತಾರೆ. ಎರಡನೆಯದು ತಾಲೂಕು ಆಫೀಸಿನಲ್ಲಿ ಸ್ವಲ್ಪ ದುಡ್ಡು ಕೊಟ್ಟರೆ ಓಲ್ಡ್‌ಏಜ್ ಪೆನ್‌ಷನ್ ಮಾಡಿಕೊಡುತ್ತಾರೆ. ಇದನ್ನು ಸ್ವಲ್ಪ ಬಿಗಿ ಮಾಡುವುದಕ್ಕೆ ಸಾಧ್ಯವಿದೆಯೇ ನ್ಯಾಯವಾಗಿ

ಯಾರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕುವಂತೆ ಮಾಡಿ ಅಕ್ರಮವಾಗಿ ತೆಗೆದುಕೊಳ್ಳುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ನಿಜವಾಗಿ ಯಾರಿಗೆ ಅವಶ್ಯಕವಾಗಿ ಸಿಕ್ಕಬೇಕೋ ಅವರಿಗೆ ಸಿಕ್ಕುವಂತೆ ಮಾಡಬೇಕು. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಆಗಿಂದಾಗ್ಗೆ ಚೆಕ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

SRI S. M. YAHYA.—He knows the problem, Our main intention is to provide certain relief to the very old people who are destitutes, for which we are doing our best. For this we require co-operation of all *i.e.* hon. Members and other social workers.

ಶ್ರೀ ಡಿ. ಟಿ. ರಾಮು.—ಕೆಲವರಿಗೆ ಡಿಪೆಂಡೆಂಟ್ಸ್ ಇದ್ದರೂ ಕೂಡ ಮಕ್ಕಳು ತಂದೆತಾಯಿಗಳನ್ನು ಹೊಟ್ಟೆಗೆ ಹಿಟ್ಟು ಹಾಕದೆ ಓಡಿಸುತ್ತಾರೆ ಅಂಥಾ ಕೇಸುಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುವುದು ಒಳ್ಳೆಯದಲ್ಲವೇ

ಶ್ರೀ ಎಸ್. ಎಂ. ಯಾಹ್ಯಾ.—ಇಡೀ ಯೋಜನೆಯೇ ಸಹಾನುಭೂತಿಯಿಂದ ಇದೆ.

ಅಧ್ಯಕ್ಷರು.—ಪ್ರಶ್ನೋತ್ತರವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)

Sanction of Loans to S.C./S.T. Applicants in Tiptur Taluk.

778. SRI V. L. SIVAPPA (Tiptur)—Will the Minister of State for Co-operation be pleased to state:—

(*a*) the number of members in the Tiptur Taluk Scheduled Castes and Scheduled Tribes House Building Co-operative Society of which how many have been sanctioned the loan for construction of houses from 1-7-72 to 30-6-77;

(*b*) the number of cases in which loans have been completely disbursed;

(*c*) the number of cases wherein, only 1st instalment are released and the nuruber of cases where sanctioned loan is not yet released?

SRI V. M. KUSHNOOR (Minister of State for Co-operation)—

(*a*) There were 849 members in the Tiptur Taluk Scheduled Castes and Scheduled Tribes House Building Co-operative Society, Tiptur. 55 members have been sanctioned loan for construction of houses as from 1-7-72 to 30-6-77.

(*b*) In none of the cases loans have been completely disbursed.

(*c*) In all the 55 cases of loan sanctioned, 1st instalment of loan have been completely released.